# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ಅರಸನಾದ ದಾವೀದನು (ಭಾಗ 2)

ಬರಹಗಾರರು: Edward Hughes

ಚಿತ್ರಲೇಖಕರು: Lazarus

ಅಳವಡಿಸುವವರು: Ruth Klassen

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ದಾವೀದನು

ಯೆಹೂದದ

ಆರಸನಾಗಿ

ದಕ್ಷಿಣ

ಭಾಗದಲ್ಲಿರುವ

ಇಸ್ರಾಯೇಲ್ಯರನ್ನು

ಆಳುವವನಾದನು, ...



... ಇನ್ನೂಳಿದ ಇಸ್ರಾಯೇಲ್ಯರನ್ನು ಸೌಲನ ಮಗನಾದ ಈಷ್ಬೋಶೆತನೂ 7 ವರ್ಷಗಳಕಾಲ ಅವರನ್ನು ಆಳಿದನು ಆದರೆ ದಾವೀದನು ದಿನದಿಂದ ದಿನಕ್ಕೆ ಬಲಶಾಲಿಯಾದನು.





ಕೊನೆಗೆ

ಈಷ್ಬೋಶೆತನೂ

ತನ್ನ ಎರಡು

ಸೈನಿಕರಿಂದ

ಕೊಲ್ಲಲ್ಪಟ್ಟನು.

ಇಸ್ರೆಯೇಲಿನ ಎಲ್ಲಾ ಕುಲದವರು ಬಂದು ದಾವೀದನನ್ನು ಇಸ್ರಾಯೇಲ್ಯರ ಅರಸನನ್ನಾಗಿ ಅಭಿಷೇಕ ಮಾಡಿದರು ಆತನು ಆ ದೇಶದ ರಾಜನಾದನು.



ದಾವೀದನು ಮೊದಲನೆಯದಾಗಿ ಯೆರುಸಲೇಮ್‌ನ್ನು ಸ್ವಾದಿನ ಮಾಡಿಕೊಂಡನು. ಆದು ದಾವೀದ ನಗರವಾಗಿ ಗುರುತಿಸಲ್ಪಟ್ಟಿತು.



ಅದು ವೈರಿಗಳನ್ನು ಎದುರಿಸುವುದಕ್ಕೆ ಬಲವಾದ ಪಟ್ಟಣವಾಗಿ ಮಾರ್ಪಟ್ಟಿತ್ತು.



ಯೆರುಸಲೇಮ್‌ನಿಂದ ಹೊರಟ ದಾವೀದನ ಸೈನ್ಯವು ಫಿಲಿಷ್ಟಿಯರನ್ನು ಮತ್ತು ಇನ್ನೂ ಉಳಿದ ಇಸ್ರೇಯೇಲರ ವೈರಿಗಳನ್ನು ಜಯಿಸಿತು.





ನಂತರ
ದಾವೀದನು ದೇವರ
ಮಂಜೂಷವನ್ನು
ಯೇರುಸಲೇಮ್‌ಗೆ
ತಂದನು.

ಅದರಲ್ಲಿ ದೇವರ 10 ಆಜ್ಞೆಗಳು ಮತ್ತು ಮೊಶೆಯ ಮೂಲಕವಾಗಿ ಕೊಡಲ್ಪಟ್ಟಿರಿವ ಇನ್ನೂ ಕೆಲವು ಆಜ್ಞೆಗಳು ಅದರಲ್ಲಿದ್ದವು. ಅದು ಮಾಹಾ ಪರಿಶುದ್ದವಾದದ್ದು ಅದಕ್ಕೆ ಎಲ್ಲಾ ಇಸ್ರೆಯೇಲರು ವಿದೇಯರಾಗಬೇಕು.





ಈ ದಾವೀದನು

ಬುದ್ಧಿವಂತನು ಮತ್ತು ತನ್ನನ್ನು

ತಗ್ಗಿಸಿ ಕೊಳ್ಳುವವನು ಹಾಗೂ

ದೇವರಿಗೆ ಯಾವಾಗಲೂ

ಪ್ರಾರ್ಥನೆಯನ್ನು

ಮಾಡುವಂತವನಾಗಿದ್ದನು.

ಇವನ ಆಡಳಿತದದ
ಪ್ರಾರಂಭ ವರ್ಷಗಳಲ್ಲಿ
ಆನೇಕ ಯುದ್ಧಗಳನ್ನು
ಮಾಡಿದನು.



ದಾವೀದನು ಒಂದು ಉತ್ತಮವಾದ ಅರಮನೆಯಲ್ಲಿ ವಾಸಿಸುತ್ತಿದ್ದನು. ಆದರೆ ದೇವರ ಮಂಜೂಷವು ಗುಡಾರದಲ್ಲಿತ್ತು.





ಅದುದ್ದರಿಂದ ಪ್ರವಾದಿಯಾದ ನಾತನಾನ
ಮಾರ್ಗದರ್ಶನದಿಂದ
ದೇವರ ಆಲಯವನ್ನು
ಕಟ್ಟಲು
ತೀರ್ಮಾನಿಸಿದನು.



ದೇವರು
ರಾತ್ರಿಯಲ್ಲಿ
ದಾವೀದನಿಗೆ ಸಂದೇಶವನ್ನು
ಕೊಟ್ಟು ಹೇಳಿದ್ದೆನೆಂದರೆ. ನಾನು ನಿನಗೊಸ್ಕರ ಒಂದು
ಮನೆಯನ್ನು ಕಟ್ಟುವೆನೆಂದು ಮಾತುಕೊಡುತ್ತನೆ.





ನಿನ್ನ
ಆಯುಷ್ಕಾಲವು
ಮುಗಿದು
ನೀನು ಪಿತೃಗಳ
ಬಳಿಗೆ ಸೇರಿದ ಮೇಲೆ
ನಿನ್ನಿಂದ ಹುಟ್ಟುವವನನ್ನು
ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು ಅವನು
ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು.

ದಾವೀದನು ಸೌಲನ ಕುಟುಂಬಕ್ಕೆ ಸಹಾಯ ಮಾಡಲು ಬಯಸವ ಸಮಯದಲ್ಲಿ ಕುಂಟನಾದ ಯೋನಾತನನ ಮಗನಾದ ಮೆಫೀಬೋಶೆತನು ಕಂಡು ಈತನು ಯಾವಾಗಲೂ ರಾಜ ಪಂಕ್ತಿಯಲ್ಲಿ ಊಟಮಾಡಲಿ ಎಂದು ಹೇಳಿದನು.



ಈ ಮೆಫೀಬೋಶೆತನ
ತಂದೆಯಾದ ಯೋನಾತನನು
ದಾವೀದನ ಉತ್ತಮ
ಸ್ನೇಹಿತನಾಗಿದ್ದನು.





ದಾವೀದನು ದೇವರಿಗೆ
ವಿದೇಯನಾದಂತಲ್ಲಾ
ದೇವರು ಆತನನ್ನು
ಅಭಿವೃದ್ಧಿಗೆ ತಂದನು.



ಒಂದು ದಿನ ಒಂದು
ಭಯಂಕರ ಘಟನೆ
ನಡೆಯಿತು. ಆತನು
ಮನೆಯಲ್ಲಿ ಉಳಿದು
ಸೈನಿಕರನ್ನು ಯುದ್ಧಕ್ಕೆ
ಕಳಿಸಿದನು.



ಆತನಿಗೆ ರಾತ್ರಿಯಲ್ಲಿ
ನಿದ್ದೆಯು ಬಾರದೆ
ಮಾಳಿಗೆ ಮೇಲೆ
ತಿರುಗಾಡುತ್ತಿದ್ದು
ಪಟ್ಟಣವನ್ನು
ನೋಡಿದನು.

ಆ ಸಮಯದಲ್ಲಿ ಸ್ನಾನ
ಮಾಡುವಂತ ಒಬ್ಬ ಸ್ತ್ರೀಯನ್ನು
ನೋಡಿದನು, ಅವಳ ಹೆಸರು
ಬೆತ್ಸೇಬ. ಅವಳು ಊರಿಯನ
ಹೆಂಡತಿಯಾಗಿದ್ದಳು ಅವಳ
ಸಂಗಡ ಪಾಪವನ್ನು ಮಾಡಿದನು.





ಆ ಊರಿಯನು ದಾವೀದನ
ಸೈನಿಕರಲ್ಲಿ ಧೈರ್ಯಶಾಲಿಯಾದ
ಸೈನಿಕನಾಗಿದ್ದನು. ಮತ್ತು
ಬೆತ್ಸೇಬೆಯು ಬಂದು ದಾವೀದನ
ಹತ್ತಿರ ಹೇಳಿದ್ದೆನೆಂದರೆ
ನಮಗೊಂದು ಮಗು
ಹುಟ್ಟುವುದಕ್ಕಿದೆ ಅಂದಳು.





ಆದರೆ ದಾವೀದನಿಗೆ ಆ ಒಂದು ಪಾಪದಿಂದ ಬಹಳ ತೊಂದರೆವುಂಟಾಗುವುದೆಂದು ತಿಳಿದಿತ್ತು.







ದಾವೀದನು ಪಾಪವನ್ನು ಅರಿಕೆ ಮಾಡುವುದನ್ನು ಬಿಟ್ಟು ಪಾಪವನ್ನು ಮರೆಮಾಡುವುದಕ್ಕೆ ಪ್ರಯತ್ನಿಸುತ್ತಿದ್ದನು. ಆದರೆ ಏನು ಪ್ರಯೋಜನವಾಗಲಿಲ್ಲ.



ಊರಿಯನನ್ನು
ಯುದ್ಧರಂಗದಿಂದ ಮನೆಗೆ
ಕರೆದನು, ಅವನು ಮುಂದೆ ಹುಟ್ಟುವಂತ ಮಗು
ಊರಿಯನದೆ ಎಂದು ತಿಳಿದುಕೊಳ್ಳುವನು ಎಂದು
ದಾವೀದನ ಆಲೋಚನೆಯಾಗಿತ್ತು.



ಆದರೆ ಊರಿಯನ ಜೊತೆಗಾರರು ಯುದ್ದದಲ್ಲಿರುವಾಗ
ಮನೆಯಲ್ಲಿ ಮಲಗಿಕೋಳ್ಳದೆ ರಾಜನ ಮನೆಯ
ಬಾಗಲಿನಲ್ಲಿ ಮಲಗಿಕೊಂಡಿದ್ದನು.

ದಾವೀದನು ಇನ್ನು ಮಾಹಾ ದುಷ್ಟಕಾರ್ಯವನ್ನು ಮಾಡಿದನು. ದಾವೀದನು ಒಂದು ಪತ್ರವನ್ನು ಊರಿಯನಿಗೆ ಕೊಟ್ಟು ಯುದ್ಧಕ್ಕೆ ಅವನನ್ನು ತಿರುಗಿ ಕಳಿಸಿದನು.



ಪತ್ರದಲ್ಲಿ ಊರಿಯನನ್ನು ಯುದ್ಧದಲ್ಲಿ ಕೊಲ್ಲುವಂತೆ ಮುಖ್ಯಧಿಪತಿಗೆ ಆದೇಶಿಸಲಾಗಿತ್ತು.



ದಾವೀದನು ಊರಿಯನನ್ನು
ಕೊಲ್ಲಿಸಿ ಅವನ
ಹೆಂಡತಿಯನ್ನು ತನ್ನ
ಹೆಂಡತಿಯನ್ನಾಗಿ
ಮಾಡಿಕೊಂಡನು.





ದಾವೀದನು
ಮಾಡಿದ ತಪ್ಪನ್ನು
ತೋರಿಸುವುದಕ್ಕೆ
ದೇವರು ತನ್ನ
ಸೇವಕನಾದ
ನಾತನನ್ನನ್ನು
ಕಳಿಸಿದನು.

ನಾತನನು ದಾವೀದನಿಗೆ ಶ್ರೀಮಂತ ಮತ್ತು ಬಡವನ ಕಥೆಯನ್ನು ಹೇಳಲು ಆರಂಭಿಸಿದನು, ...



... ಅದೇನೆಂದರೆ ಆ ಶ್ರೀಮಂತನಿಗೆ ನೂರು ಕುರಿಗಳಿದ್ದವು ಮತ್ತು ಆ ಬಡವನಿಗೆ ಒಂದೇ ಒಂದು ಕುರಿ ಇತ್ತು ಆತನು ಅದನ್ನು ತನ್ನ ಮಗಳಂತೆ ಸಾಕುತ್ತಿದ್ದನು.



ಒಬ್ಬ ಪ್ರಯಣಿಕನು ಆ ಶ್ರೀಮಂತ ಮನೆಗೆ ಬಂದಾಗ ಆತನು ತನಗಿದ್ದ ನೂರು ಕುರಿಗಳಲ್ಲಿ ಒಂದನ್ನು ತಗೆದುಕೊಳ್ಳದೆ ಆ ಬಡವನ ಕುರಿಯನ್ನು ತಗೆದುಕೊಂಡು ಕೊಂದನು.





ಆ ಶ್ರೀಮಂತನು
ಸ್ವಾರ್ಥತೆಯ ಕಥೆಯನ್ನು
ಕೇಳಿ ದಾವೀದನಿಗೆ ಸಿಟ್ಟು
ಬಂದು ಹೀಗೆ ಅಂದನು,
“ಆತನು ಸಾಯಲೇ ಬೇಕು”.

ನಾತನನು ಧೈರ್ಯವಾಗಿ ಆ ಮನುಷ್ಯನು ನೀನೇ ಅಂದನು. ಆ ಕಥೆಯಲ್ಲಿ ಬಂದಂತ ಆ ಶ್ರೀಮಂತನಿಗಿಂತ ದಾವೀದನು ಬಹಳ ಹೀನವಾದ ಕಾರ್ಯವನ್ನು ಮಾಡಿದ್ದನು.





ದಾವೀದನು ಎಷ್ಟು ದುಷ್ಟನೆಂದು ದೇವರು
ತೋರಿಸಿದನು, ದಾವೀದನಿಗೆ
ತನ್ನ ಪಾಪದ ಅರಿವಾಗಿ
ಬಹಳವಾಗಿ ಗೋಳಾಡಿ
ದೇವರಿಂದ ಕ್ಷಮೆಯನ್ನು
ಯಾಚಿಸಿದನು.

ದೇವರು ಆತನನ್ನು ಕ್ಷಮಿಸಿದನು, ಆದರೆ ಬೆತ್ಸೇಬೆಯಿಂದ
ಹುಟ್ಟಿದ ಮಗು ಹುಟ್ಟುತ್ತಲೆ
ಸತ್ತು ಹೋಯಿತು.





ದೇವರು ದಾವೀದನ
ಘೋರವಾದ ಪಾಪವನ್ನು
ಕ್ಷಮಿಸಿದನು ಮತ್ತು ಬೆತ್ಸೇಬೆಗೆ
ಇನ್ನೊಂದು ಮಗು ಜನಿಸಿತು
ಆತನ ಹೆಸರು
ಸಲೋಮನನು, ...



... ಅವನು ದಾವೀದನ ನಂತರ ದೊಡ್ಡ ರಾಜನಾದನು, ಮತ್ತು ದಾವೀದನಿಗೆ ಇನ್ನೂ ಕೆಲವು ಮಕ್ಕಳಿದ್ದಾರೆ ಅವರಿಂದ ಆತನಿಗೆ ಬಹಳ ಕರಕರೆಯು ಉಂಟಾಯಿತು.

# ಅರಸನಾದ ದಾವೀದನು (ಭಾಗ 2)

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**2 ಸಮುವೇಲು 1–12**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16